ಸಿ.ಸಿ .ನಂ. 160/2023 ಪಿಡಬ್ಲೂಃ 1

ದಿನಾಂಕಃ 19-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಅವರ ವಕೀಲರಿಂದಃ**

4. ಈ ಕೇಸಿನ ಸಾಲದ ವ್ಯವಹಾರದ ಸಂದರ್ಬದಲ್ಲಿ ನಾನು ಫಿರ್ಯಾದುದಾರಾ ಶಾಖೆಯಲ್ಲಿ ಕಿರಿಯ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದೆನು .ದಿಃ 28-02-2019 ರಂದು ಸಾಲಗಾರ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಸದರಿ ಅರ್ಜಿಯನ್ನು ವ್ಯಾಪಾರದ ಸಲುವಾಗಿ ಸಲ್ಲಿಸಿರುತ್ತಾರೆ . ಸದರಿ ವ್ಯಾಪಾರ ಏನು ಎಂದು ನನಗೆ ಗೊತ್ತಿಲ್ಲ . ಸದರಿ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ನಾವು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ . ಸದರಿ ಸಾಲಕ್ಕೆ ಆರೋಪಿ ಹಾಗೂ ಸಾಲಗಾರನ ಹೆಂಡತಿ ಜಾಮೀನುದಾರರಾಗಿರುತ್ತಾರೆ . ಸದರಿ ಸಾಲದ ಅರ್ಜಿಯನ್ನು ಸಲ್ಲಿಸುವಾಗ ಸಾಲಗಾರನ ಜೊತೆಯಲ್ಲಿ ಅವರ ಹೆಂಡತಿ ಹಾಗೂ ಆರೋಪಿ ನಮ್ಮ ಶಾಖೆಗೆ ಬಂದಿರುತ್ತಾರೆ . ಸಾಲಕ್ಕಾಗಿ ಬೇಡಿಕೆ ಇಟ್ಟ ಸಂದರ್ಭದಲ್ಲಿ ಸಾಲ ಮರುಪಾವತಿ ಮಾಡುವ ಸಾಮರ್ಥ್ಯವನ್ನು ಪರಿಶೀಲನೆ ಮಾಡಿಯೇ ನಾವು ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ . ಸಾಲಕ್ಕಾಗಿ ಅರ್ಜಿ ಬಂದ ನಂತರ ಸದರಿ ಅರ್ಜಿಯನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಇಟ್ಟು ಠರಾವು ಮಾಡಿಸಿ ಮಂಜೂರು ಮಾಡಿಸಬೇಕು ಎಂದರೆ ಸಾಕ್ಷಿಯು ಆ ರೀತಿ ಏನು ಇಲ್ಲ , ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಅದನ್ನು ನಾವು ನಮ್ಮ ಪ್ರಧಾನ ಕಚೇರಿಗೆ ಕಳುಹಿಸುತ್ತೇವೆ , ನಮ್ಮ ಪ್ರಧಾನ ಕಚೇರಿಯವರು ಸಾಲ ಮಂಜೂರಾತಿ ಮಾಡುತ್ತಾರೆ ಎಂದು ನುಡಿಯುತ್ತಾರೆ . ಕೆಲವೊಂದು ಸಲ ಸಾಲದ ಅರ್ಜಿ ತಿರಸ್ಕಾರಗೊಳ್ಳುವ ಸಂದರ್ಭವೂ ಸಹ ಇರುತ್ತದೆ ಎಂದರೆ ಸರಿ .

5. ಸಾಲಕ್ಕಾಗಿ ಅರ್ಜಿಯನ್ನು ಕೊಟ್ಟ ದಿವಸವೇ ಸಾಲದ ಕರಾರು , ಡಿಮಾಂಡ ಪ್ರಾಮಿಸರಿ ನೋಟು ಹಾಗೂ ಹೈಪೋಥಿಕೇಶನ್ ಕರಾರು ಪತ್ರಕ್ಕೆ ನಾವು ಸಹಿಗಳನ್ನು ಪಡೆದುಕೊಳ್ಳುತ್ತೇವೆ . ದಿಃ 08-03-2019 ರಂದು ನಾವು ಸಾಲವನ್ನು ಮಂಜೂರು ಮಾಡಿರುತ್ತೇವೆ . ಸದರಿ ಸಾಲಕ್ಕೆ ಸಾಲಗಾರ ಹಾಗೂ

ಅವರ ಇಬ್ಬರು ಜಾಮೀನುದಾರರ ಜೀವ ವಿಮಾ ಪಾಲಿಸಿಗಳನ್ನು ಭದ್ರತೆಗಾಗಿ ತೆಗೆದುಕೊಂಡಿರುತ್ತೇವೆ . ಸದರಿ ಸಾಲ ಮಾಸಿಕ 60 ಕಂತುಗಳ ಸಾಲವಾಗಿರುತ್ತದೆ . ಸಾಲವನ್ನು ಪಡೆದುಕೊಂಡ ನಂತರ ಸಾಲಗಾರ ಸಾಲದ ಒಂದು ಕಂತನ್ನು ಮಾತ್ರ ತುಂಬಿರುತ್ತಾರೆ . ಸಾಲ ಕಟ್ ಬಾಕಿಯಾದ ನಂತರ ಸಾಲಗಾರ ಹಾಗೂ ಅವರ ಜಾಮೀನುದಾರರಿಗೆ ನಾವು ನಮ್ಮ ವಕೀಲರ ಮೂಲಕ ನೋಟಿಸನ್ನು ಕೊಟ್ಟಿರುತ್ತೇವೆ . ಸದರಿ ನೋಟಿಸಿನ ಪ್ರತಿಯನ್ನು ಈ ಪ್ರಕರಣದಲ್ಲಿ ನಾವು ಹಾಜರು ಮಾಡಿಲ್ಲ . ಸದರಿ ನೋಟಿಸಿನ ಪ್ರತಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಆ ರೀತಿ ವಕೀಲರ ಮೂಲಕ ನೋಟಿಸನ್ನು ಕೊಟ್ಟ ನಂತರ ಸಾಲಗಾರ ನಮ್ಮ ಶಾಖೆಗೆ ಬಂದು ಹಣವನ್ನು ತುಂಬಿರುವುದಿಲ್ಲ . ಸದರಿ ನೋಟಿಸನ್ನು ಕೊಟ್ಟ ನಂತರ ನಾನು ಸಾಲಗಾರ ಹಾಗೂ ಅವರ ಜಾಮೀನುದಾರರ ಮನೆಗೆ ಸಾಲ ವಸೂಲಾತಿಗಾಗಿ ಹೋಗಿರುತ್ತೇನೆ.

6. ಸಾಲಗಾರ ಲಾರಿ ಚಾಲಕ ವೃತ್ತಿಯನ್ನು ಮಾಡುತ್ತಿದ್ದಾರೆ . ಆರೋಪಿಯು ಕೆಎಸ್ ಆರ್ ಟಿ ಸಿ ಚಾಲಕನಾಗಿರುತ್ತಾರೆ . ಈ ಕೇಸಿನ ಸಾಲಕ್ಕೆ ಸಂಬಂಧಪಟ್ಟಂತೆ ಸಾಲಗಾರ ಹಾಗೂ ಅವರ ಜಾಮೀನುದಾರರ ವಿರುದ್ಧ ನಾವು ಪಂಚಾಯತ್ ದಾವೆಯನ್ನು ದಾಖಲಿಸಿರುತ್ತೇವೆ . ಸದರಿ ದಾವೆಯನ್ನು ಯಾವ ಇಸವಿಯಲ್ಲಿ ದಾಖಲಿಸಿರುತ್ತೇವೆ ಎಂದು ನನಗೆ ನೆನಪಿಲ್ಲ . ಸದರಿ ಪಂಚಾಯತ್ ದಾವೆಯಲ್ಲಿ ಇಲ್ಲಿಯವರೆಗೆ ಅವಾರ್ಡ ಆಗಿರುವುದಿಲ್ಲ . ಆರೋಪಿಯು ನಮ್ಮ ಶಾಖೆಗೆ ಬಂದು ನನ್ನ ಹತ್ತಿರ ಚೆಕ್ ನ್ನು ಕೊಟ್ಟಿರುತ್ತಾರೆ . ಚೆಕ್ ನಲ್ಲಿ ಹೇಳಿರುವ 2,73,217/- ನಿಪಿ-13 ಸಾಲದ ಖಾತೆಯ ಉತಾರದಲ್ಲಿ ನಮೂದು ಇರುವುದಿಲ್ಲ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಪಿಡಬ್ಲೂಃ 1

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.